ದಿನಾಂಕಃ 27-09-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಹೆಚ್ ಟಿ ಪ್ರತಿವಾದಿ ಪರ ವಕೀಲರಿಂದಃ-**

ನನಗೆ ಈಗ 73 ವರ್ಷ. ನಾನು 7 ನೇ ತರಗತಿ ವರಗೆ ಓದಿರುತ್ತೇನೆ. ನಾವು ಒಟ್ಟು 3 ಜನ ಅಣ್ಣ ತಮ್ಮಂದಿರು. ನಾವು ಸುಮಾರು 50 ವರ್ಷದ ಹಿಂದೆಯೇ ಅಣ್ಣ ತಮ್ಮಂದಿರು ಬೇರೆ ಯಾರಿಗಿರುತ್ತೇವೆ. ನನಗೆ ಒಟ್ಟು 4 ಜನ ಮಕ್ಕಳು. ಹೆಣ್ಣು ಮಕ್ಕಳು ಇರುವುದಿಲ್ಲ. ಮೂಡ್ಲಗಿರಿಯಪ್ಪನವರು ನನ್ನ ಹೆಂಡತಿಯ ತಮ್ಮನಾಗಬೇಕು. ಸದರಿ ಮೂಡ್ಲಗಿರಿಯಪ್ಪ ಮತ್ತು ನಾವು ಮೊದಲೀನಿಂದಲೂ ಇಂದಿನವರೆಗೂ ಒಂದೇ ಕುಟುಂಬದಲ್ಲಿ ವಾಸವಿದ್ದೇವೆ. ನಮ್ಮ ಕುಟುಂಬದಲ್ಲಿ ಒಟ್ಟು 10 ಜನ ಇರುತ್ತೇವೆ. ಸದರಿ ಮೂಡ್ಲಗಿರಿಯಪ್ಪ ನವರೇ ನಮ್ಮ ಕುಟುಂಬದ ಎಲ್ಲಾ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಾರೆ ಎಂದರೆ ಸರಿ. ನನ್ನ ಹೆಂಡತಿ ಗ್ರಾಮ ಪಂಚಾಯಿತಿಯ ಸದಸ್ಯರು ಮತ್ತು ಅಧ್ಯಕ್ಷರು ಸಹ ಆಗಿದ್ದರು ಎಂದರೆ ಸರಿ. ಮೂಡ್ಲಗಿರಿಯಪ್ಪ ರವರೇ ನನ್ನ ಹೆಂಡತಿಯ ರಾಜಕೀಯ ಪಂಚಾಯಿತಿ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಮೂಡ್ಲಗಿರಿಯಪ್ಪ ರವರಿಗೆ 1 ಹೆಣ್ಣು ಮತ್ತು 1 ಗಂಡು ಮಕ್ಕಳು ಇರುತ್ತಾರೆ. ಮೂಡ್ಲಗಿರಿಯಪ್ಪ ರವರು ಮಗಳು ಬೀರೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ. ಹುಲ್ಲೇಳಹಳ್ಳಿ ಗ್ರಾಮದ ವ್ಯಾಪ್ತಿಯು ಬೀರೂರು ಠಾಣಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಎಂದರೆ ಸರಿ.ದಾವಾ ಆಸ್ತಿಯ ಅಸೆಸ್ಮೆಂಟ್ ನಂ. 471, 472, 473 ಆಗಿರುತ್ತದೆ. ನಾನು 3 ಆಸ್ತಿಗೆ ಸಂಬಂಧಿಸಿದಂತೆ ದಾವೆ ಹೂಡಿರುತ್ತೇನೆ. ಅಸೆಸ್ಮೆಂಟ್ ಸಂಖ್ಯೆ 471 ರ ವಿಸ್ತೀರ್ಣ ನನಗೆ ಈಗ ಹೇಳಲು ಆಗುವುದಿಲ್ಲ. ಅದರ ಚೆಕ್ಕುಬಂಧಿ ಪಶ್ಚಿಮಕ್ಕೆಃ ನನ್ನದೇ ನಿವೇಶನ, ದಕ್ಷಿಣಕ್ಕೆ ನನ್ನ ಬಾಮೈದನಾದ ಮೂಡ್ಲಗಿರಿಯಪ್ಪ ನವರ ತೋಟ, ಉತ್ತರಕ್ಕೆಃ ಪಂಚಾಯಿತಿ ಕಟ್ಟಡ, ಪೂರ್ವಕ್ಕೆಃ ನರಸೇಗೌಡರ ಜಮೀನು. ಅಸೆಸ್ಮೆಂಟ್ ನಂ. 472 ರ ಅಳತೆ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಅದರ ಚೆಕ್ಕುಬಂಧಿ ದಕ್ಷಿಣಕ್ಕೆಃ ಮೂಡ್ಲಗಿರಿಯಪ್ಪ ನವರ ತೋಟ, ಪಶ್ಚಿಮಕ್ಕೆಃ ನನ್ನದೇ ನಿವೇಶನ, ಉತ್ತರಕ್ಕೆಃ ಪಂಚಾಯಿತಿ ಕಟ್ಟಡ, ಪೂರ್ವಕ್ಕೆಃ 471 ರ ಸ್ವತ್ತು . ಅಸೆಸ್ಮೆಂಟ್ ನಂ 473 ರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಅದರ ಚಕ್ಕುಬಂಧಿಃ ಉತ್ತರಕ್ಕೆಃ ನನ್ನದೇ ಖಾಲೀ ನಿವೇಶನ, ದಕ್ಷಿಣಕ್ಕೆಃ ಮೂಡ್ಲಪ್ಪ ರವರ ತೋಟ, ಪೂರ್ವಕ್ಕೆಃ ನನ್ನದೇ ನಿವೇಶನ, ಪಶ್ಚಿಮಕ್ಕೆಃ ಪಂಚಾಯಿತಿ ಕಟ್ಟಡ. ಸದರಿ ಅಸೆಸ್ಮೆಂಟ್ ನಂ 471 ರಲ್ಲಿ ನಮ್ಮ ವಾಸದ ಮನೆ ಇದೆ. ಅಸೆಸ್ಮೆಂಟ್ ನಂ 472 ರಲ್ಲಿ ದನದ ಕೊಟ್ಟಿಗೆ ಇದೆ. ಅಸೆಸ್ಮೆಂಟ್ ನಂ 473 ರಲ್ಲಿ ಬಾವಿ ಇರುತ್ತದೆ. ಸದರಿ ನಮ್ಮ ಊರಿನಲ್ಲಿ ಈ 3 ಆಸ್ತಿಗಳು ಹೊರತು ಪಡಿಸಿ ಬೇರೆ ಯಾವುದೇ ನಿವೇಶನ ನಮಗೆ ಇರುವುದಿಲ್ಲ. ನಮ್ಮ ಕುಟುಂಬಕ್ಕೆ ಒಟ್ಟು 15 ಎಕರೆ ಜಮೀನು ಇದ್ದು ಸ್ವಲ್ಪ ಭಾಗ ನನ್ನ ಹೆಸರಿನಲ್ಲಿದ್ದು, ಸ್ವಲ್ಪ ಭಾಗ ನನ್ನ ಅಜ್ಜನ ಹೆಸರಿನಲ್ಲಿ ಇರುತ್ತದೆ.

ನನ್ನ ಹೆಸರಿನಲ್ಲಿ 4 ಎಕರೆ ಜಮೀನು ಇರುತ್ತದೆ. ದಾವಾ ಸ್ವತ್ತುಗಳು ನನ್ನ ಹೆಸರಿಗೆ ನನ್ನ ಹೆಂಡತಿಯ ತಾಯಿ ಕಡೆಯಿಂದ ಬಂದಿರುತ್ತವೆ. ಸದರಿ ಸೈಟುಗಳು 1972-73 ರಲ್ಲಿ ಅನ್ಯಕ್ರಾಂತವಾಗಿರುತ್ತದೆ. ( Alianation) ಆಗಿರುತ್ತವೆ. ನನ್ನ ಹೆಸರಿಗೆ ಅನ್ಯಕ್ರಾಂತವಾಗಿರುತ್ತದೆ. ನನ್ನ ಹೆಸರಿಗೆ ಅನ್ಯಕ್ರಾಂತವಾಗಿದ್ದಕ್ಕಿಂತ ಮುಂಚೆ ನನ್ನ ಹೆಂಡತಿಯ ತಾಯಿ ಹೆಸರಿನಲ್ಲಿ ದಾವಾ ಆಸ್ತಿಗಳು ಇದ್ದು ಸದರಿ ಸ್ವತ್ತನ್ನು ಹಿತ್ತಲು ಮತ್ತು ಕಣವನ್ನಾಗಿ ಉಪಯೋಗಿಸುತ್ತಿದ್ದರು. ಪಂಚಾಯಿತಿ ದಾಖಲೆಗೆ ದಾವಾ ಸ್ವತ್ತುಗಳು 1974 ರಲ್ಲಿ ನಮೂದಾಗಿರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಅನ್ಯಕ್ರಾಂತವಾಗುವುದಕ್ಕಿಂತ ಮುಂಚೆ ಸರ್ವೆ ನಕ್ಷೆ ತಯಾರಿಸಿ ನಂತರ ಅನ್ಯಕ್ರಾಂತ ಮಾಡಿಸಿರುತ್ತೇನೆ. ಸದರಿ ಸರ್ವೇ ನಕ್ಷೆಯನ್ನಾಗಿ ಅಥವಾ ಅನ್ಯಕ್ರಾಂತ ಆದೇಶಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಹೆಂಡತಿಯ ತಾಯಿ ಹೆಸರಿನಲ್ಲಿ ದಾವಾ ಆಸ್ತಿಗಳು ಇದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಸರ್ವೇ ನಕಾಶೆಯನ್ನು ಮತ್ತು ಅನ್ಯಕ್ರಾಂತದ ಆದೇಶವನ್ನು ಮತ್ತು ನನ್ನ ಹೆಂಡತಿಯ ತಾಯಿಯ ಹೆಸರಿನಲ್ಲಿ ದಾವ ಆಸ್ತಿಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಈ ದಾವೆಗೆ ಸಂಬಂಧಿಸಿದ ದಾಖಲಾತಿಗಳನ್ನು ಮತ್ತು ಮಾಹಿತಿಯನ್ನು ನನ್ನ ಬಾಮೈದ ನಾದ ಮೂಡ್ಲಗಿರಿಯಪ್ಪ ನವರು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಜೊತೆಗೆ ನಾನು ನೀಡಿರುತ್ತೇನೆಂದು ನುಡಿಯುತ್ತಾರೆ. ನಾನು ದಾವೆ ಹೂಡಿರುವುದು ಅಸೆಸ್ಮೆಂಟ್ ನಂ. 473 ರಲ್ಲಿ ಮಾತ್ರ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 3 ಅಸೆಸ್ಮೆಂಟ್ ಗಳ ಮೇಲೆ ದಾವೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ನಾನು ಯಾವ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಂದು ನನಗೆ ಈಗ ಹೇಳಲು ಆಗುವುದಿಲ್ಲ. ಪ್ರತಿವಾದಿಯು ಬಾವಿ ಜಾಗ ಇರುವ ನಿವೇಶನದಲ್ಲಿ ಗುಡಿಸಲನ್ನು ನಿರ್ಮಾಣ ಮಾಡಲು ಬಂದಿದ್ದರಿಂದ ನಾನು ಪ್ರತಿವಾದಿಯ ವಿರುದ್ದ ಈ ದಾವೆ ಹೂಡಿರುತ್ತೇನೆ. ಬಾವಿ ಇರುವ ಜಾಗದ ಅಸೆಸ್ಮಂಟ್ ನಂ. ಈಗ ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಬಾವಿ ಇರುವ ಜಾಗದ ಅಸೆಸ್ಮಂಟ್ ನಂ. 473 ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಇ-ಸ್ವತ್ತನು ಮಾಡಿಸಿರುತ್ತೇನೆ. ಸದರಿ ಇ-ಸ್ವತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನಗೆ ಯಾವಾಗ ಇ-ಸ್ವತ್ತನ್ನು ಮಾಡಿಸಿರುತ್ತೇನೆಂದು ನನಗೆ ನೆನಪಿರುವುದಿಲ್ಲ. ಇ-ಸ್ವತ್ತು ಪಂಚಾಯಿತಿಯಲ್ಲಿ ಇರುತ್ತದೆ. ನಾನು ತೆಗೆದುಕೊಂಡಿರುವುದಿಲ್ಲ. ರತ್ನಮ್ಮನವರು ಎಲ್ಲಿ ವಾಸವಾಗಿರುತ್ತಾರೆಂದು ನನಗೆ ಗೊತ್ತಿಲ್ಲ. ನಮ್ಮ ಊರಿನಲ್ಲಿ ರತ್ನಮ್ಮ ನವರು ವಾಸವಿರುವುದರಿಂದ ನನಗೆ ಅವರು ಗೊತ್ತಿರುತ್ತಾರೆ. ರತ್ನಮ್ಮ ನವರು ನಮ್ಮ ಬೀದಿಯಲ್ಲಿ, ಯಾವ ಮನೆಯಲ್ಲಿ ವಾಸವಿರುತ್ತಾರೆಂದು ನನಗೆ ಗೊತ್ತಿಲ್ಲ.

ನಮ್ಮ ಊರಿನಲ್ಲಿ ರತ್ನಮ್ಮ ನವರು ಒಬ್ಬರೇ ವಾಸವಿರುತ್ತಾರೆ. ರತ್ನಮ್ಮನವರಿಗೆ ಹುಲ್ಲೇಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ರತ್ನಮ್ಮನ ತಂದೆ ಹನುಮಪ್ಪ ನನಗೆ ಗೊತ್ತು. ದಾವಾ ಆಸ್ತಿಯ ಪಶ್ಚಿಮ ಭಾಗದ ರಸ್ತೆಯ ಪೂರ್ವ ಭಾಗದಲ್ಲಿ ರತ್ನಮ್ಮನವರ ತಂದೆ ಹನುಮಪ್ಪ ರವರು ಮನೆ ಕಟ್ಟಿಕೊಂಡು ಬಡಿಗೆ ಕೆಲಸ ನಿರ್ವಹಿಸಿಕೊಂಡು ವಾಸ ಇದ್ದರು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ-6 ರಿಂದ 9 ರವರೆಗಿನ ಛಾಯಚಿತ್ರವನ್ನು ಸಾಕ್ಷಿಗೆ ತೋರಿಸಿ ಕೇಳಲಾಗಿ ಸದರಿ ಛಾಯಾಚಿತ್ರದಲ್ಲಿ ಇರುವುದು ಏನು ನನಗೆ ಕಾಣಿಸುತಿಲ್ಲ ಎಂದು ನುಡಿಯುತ್ತಾರೆ. ನಿಪಿ-7 ರಲ್ಲಿ ಗುಡಿಸಲು ಮನೆ ಇರುವುದು ಕಾಣಿಸುತ್ತಿದೆ. ಸಾಕ್ಷಿ ಮುಂದುವರೆದು ಈ ಹಿಂದೆ ಪ್ರತಿವಾದಿ ರತ್ನಮ್ಮ ನವರು ಗುಡಿಸಲು ಹಾಕಿಕೊಂಡು ವಾಸವಿದ್ದರು ಎಂದು ನುಡಿಯುತ್ತಾರೆ. ಈಗಲೂ ಸಹ ಅಲ್ಲಿ ಗುಡಿಸಲು ಮನೆ ಇದೆ ಎಂದರೆ ಸರಿ, ಸದರಿ ಗುಡಿಸಲು ಮನೆಯಲ್ಲೇ ರತ್ನಮ್ಮ ನವರು ವಾಸವಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮ ಭಾಗದಲ್ಲಿ ಸದರಿ ಗುಡಿಸಲು ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಗುಡಿಸಲು ಮನೆ ಮುಂದೆ ಅಂದರೆ ಪಶ್ಚಿಮ ಭಾಗಕ್ಕೆ ಪಂಚಾಯಿತಿಯ ಮುಖ್ಯ ರಸ್ತೆ ಬರುತ್ತದೆ ಎಂದರೆ ಸರಿ. ಪ್ರತಿವಾದಿಯ ಗುಡಿಸಲು ಮನೆಯ ದಕ್ಷಿಣ ಭಾಗದಲ್ಲಿ ನನ್ನ ಮನೆಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಪ್ರತಿವಾದಿಯ ಗುಡಿಸಲು ಮತ್ತು ನಮ್ಮ ಮನೆಗೆ ಓಡಾಡಲು ಇರುವ ದಕ್ಷಿಣ ಭಾಗದ ರಸ್ತೆಯ ಮದ್ಯೆ ಒಂದು ಚೆರಂಡಿ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ರತ್ನಮ್ಮ ರವರು ವಾಸ ಇರುವ ಗುಡಿಸಲು ಮನೆ ನನ್ನ ಜಾಗದಲ್ಲಿ ಇರುತ್ತದೆ. ಸದರಿ ಗುಡಿಸಲು ಮನೆಯು ಪ್ರತಿವಾದಿ ರತ್ನಮ್ಮ ರವರು ತಂದೆಯ ಕಾಲದ್ದು ಎಂದರೆ ಸರಿ. ಪ್ರತಿವಾದಿ ರತ್ನಮ್ಮ ರವರ ತಂದೆ ಮರಣಾನಂತರ ಪ್ರತಿವಾದಿಯ ಹೆಸರಿಗೆ ಪಂಚಾಯಿತಿಯಿಂದ ಅಸೆಸ್ಮೆಂಟ್ ನಂ. 470 ರಂತೆ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಗುಡಿಸಲು ಹಾಕಲು ಬಂದಿದ್ದರಿಂದ ಈ ದಾವೆಯನ್ನು ಹಾಕಿರುತ್ತೇನೆಂದು ನಾನು ತಿಳಿಸಿದ್ದು ಅದರಂತೆ ಪ್ರತಿವಾದಿಯು ಗುಡಿಸಲು ಹಾಕುತ್ತಿರುವ ಬಗ್ಗೆ ನಿಪಿ-6 ರಿಂದ 9 ಛಾಯಾಚಿತ್ರದಲ್ಲಿ ಏನು ಕಾಣಿಸುತಿಲ್ಲ ಎಂದರೆ ಸರಿ. ಈ ನ್ಯಾಯಾಲಯಕ್ಕೆ ಬರುವ ಮೊದಲಾಗಲೀ ಈ ನ್ಯಾಯಾಲಯಕ್ಕೆ ಬಂದ ಮೇಲಾಗಲೀ ಪ್ರತಿವಾದಿಯು ಯಾವುದೇ ಗುಡಿಸಲನ್ನು ಹೊಸದಾಗಿ ಹಾಕಲು ಪ್ರಯತ್ನಿಸಿಲ್ಲ ಎಂದರೆ ಸರಿ. ನಿಪಿ-1 ರಿಂದ 5 ರ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ1 ರಿಂದ 5 ದಾಖಲೆಗಳು ಏನು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ವಾಸ ಇರುವ ಮನೆಯ ಪೂರ್ವಭಾಗಕ್ಕೆ ನಮ್ಮ ಜಾಗ ಬರುತ್ತದೆ ಎಂದರೆ ಸರಿ. ಪ್ರತಿವಾದಿ ವಾಸ ವಿರುವ ಮನೆ ಹಳೆ ಮನೆಯಾಗಿದ್ದು ಮಳೆ ಬಂದರೆ ಸೋರುತ್ತಿದ್ದು ಬಿದ್ದು ಹೋಗುವ ಹಾಗೇಇದೆ ಎಂದರೆ ಸರಿ. ಪ್ರತಿವಾದಿಯು ಮನೆಯ ಮೇಲಿರುವ ಸೋಗೆಯನ್ನು ತಗೆದು ಶೀಟ್ ಅನ್ನು ಹಾಕಲು ಹೋಗಿರುತ್ತಾರೆ ಎಂದರೆ ಸರಿ. ಸದರಿ ಸಂದರ್ಭದಲ್ಲಿ ನಾನು ತಕರಾರು ಮಾಡಿರುತ್ತೇನೆಂದರೆ ಸರಿ.

ಪ್ರತಿವಾದಿಯು ನಾನು ತಕರಾರು ಮಾಡಿದ್ದರಿಂದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗೆ ದೂರು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಸದರಿ ದೂರಿನ ಆದಾರದ ಮೇಲೆ ಗ್ರಾಮ ಪಂಚಾಯಿತಿಯ PDO ಸ್ದಳಕ್ಕೆ ಬಂದು ಸ್ದಳ ತನಿಖೆ ಮಾಡಿ ಪಂಚನಾಮೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ-6 ರಿಂದ 9 ರವರಿಗೆ ಛಾಯಾಚಿತ್ರಗಳಲ್ಲಿ ಇದೇ ಅಸೆಸ್ಮಂಟ್ ನಂ. 471, 472 ಮತ್ತು 473 ಎಂದು ಗುರುತಿಸಲು ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಅಸೆಸ್ಮಂಟ್ ನಂ. 473 ರಲ್ಲಿ ಬಾವಿ ಇದ್ದು ಖಾಲೀ ಜಾಗ ಇರುತ್ತದೆ. ಇದೇಪ್ರತಿವಾದಿಯುಮನೆಯನ್ನು ರಿಪೇರಿ ಕೆಲಸ ಮಾಡಲು ಹೋದಾಗ ನಾನುತೊಂದರೆ ನೀಡಿದ್ದ ಬಗ್ಗೆ ಇದೇ ಪ್ರತಿವಾದಿಯು ನನ್ನ ಮೇಲೆ ಕಡೂರಿನ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಒ ಒಸ್ 730/2022 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿ. ಇದೇ ಪ್ರತಿವಾದಿಯು ನನ್ನ ಮೇಲೆ ಮತ್ತು ಮೂಡಲಗಿರಿಯಪ್ಪ, ಜಾಗಕಿ, ನರಸಪ್ಪ, ಚಂದ್ರಪ್ಪ ಮತ್ತು ಸೋಮವ್ವ ರವರ ಮೇಲೆ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದರೆ ಹಾಕಿರಬಹುದು ನನಗೆ ಮಾಹಿತಿ ಇಲ್ಲ ಎಂದುನುಡಿಯುತ್ತ್ರಾರೆ. ಸಾಕ್ಷಿ ಮುಂದುವರೆದು ಇದೇ ದಾವೆಯನ್ನು ಇದೇ ನನ್ನ ವಕೀಲರನ್ನು ನೇಮಕ ಮಾಡಿಕೊಂಡಿರುತ್ತೇನೆಂದು ನುಡಿಯುತ್ತ್ರಾರೆ. ಸದರಿ ದಾವೆಯಲ್ಲಿ ನಾನು ಸಲ್ಲಿಸಿರುವ ತಕರಾರಿನಲ್ಲಿರುವ ಮಾಹಿತಿ ನನಗೆ ಗೊತ್ತಿಲ್ಲ. ಪ್ರತಿವಾದಿಯು ದಾವಾ ಆಸ್ತಿಗೆ ಸಬ್ಬದಿಚಿ,ಸಿದಂತೆ ಯಾವುದೇ ತಕರಾರು ಮಾಡಿರುವುಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಂಬಂಧಿಸಿದ ಮನೆಯನ್ನು ರಿಪೇರಿ ಮಾಡಿಕೊಂಡು ವಾಸ ಇದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಪ್ರತಿವಾದಿ ವಾಸ ಇರುವ ಮನೆ ನನ್ನದು ಎಂದುನುಡಿಯುತ್ತಾರೆ. ನನ್ನ ವಕೀಲರಿಗೆ ದಾವೆ ಹಾಕುವ ಕಾಲಕ್ಕೆ ಪ್ರತಿವಾದಿ ವಾಸ ಇರುವ ಮನೆಯ ಜಾಗ ನನಗೆ ಸೇರಿದ್ದು ಎಂದು ಮಾಹಿತಿಯನ್ನು ನೀಡಿರುತ್ತೇನೆ. ನಾನು ನನ್ನ ಭಾಮೈದ ಮೂಡಲಗಿರಿಯಪ್ಪ ರವರ ಮಾತು ಕೇಳಿ ಪ್ರತಿವಾದಿಯ ಮೇಲೆ ಸುಳ್ಳು ದಾವೆ ದಾಖಲಿಸಿದೇನೆಂದರೆ ಸರಿಯಲ್ಲ. ಪ್ರತಿವಾದಿಯು ಅವರು ಮನೆಯ ರಿಪೇರಿ ಕೆಲಸ ಮಾಡುಸುವುದಕ್ಕೆ ನಾನು ತೊಂದರೆ ನೀಡಿದ್ದಕ್ಕೆ ಪ್ರತಿವಾದಿಯು ಬೀರೂರು ಠಾಣೆಯಲ್ಲಿ ದೂರು ನೀಡಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಪೊಲೀಸಿನವರು ಸದರಿ ವಿಚಾರವಾಗಿ ನಮ್ಮನ್ನು ಮತ್ತು ಪ್ರತಿವಾದಿಯನ್ನು ಕರೆಸಿ ವಿಚಾರಣೆ ನಡೆಸಿರುತ್ತ್ರಾರೆ ಎಂದರೆ ಸರಿಯಲ್ಲ. ನನ್ನ ಮೊಮ್ಮಗಳು ಪೊಲೀಸ್ ಆಗಿದ್ದು ತನ್ನ ಪ್ರಭಾವ ಬಳಸಿ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ರತ್ನಮ್ಮ ರವರು SCST ಜನಾಂಗಕ್ಕೆ ಸೇರಿದವರು ಎಂದರೆ ಸರಿ. ಪ್ರತಿವಾದಿಯು ಬಡವರಾಗಿರುತ್ತಾರೆ ಎಂದರೆ, ಸಾಕ್ಷಿಯು ಅವರ ಮಟ್ಟಕ್ಕೆ ಅವರು ನಿಯತ್ತಾಗಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ರತ್ನಮ್ಮ ರವರು ಯಾವುದೇ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರು ಮತ್ತು ಅಧ್ಯಕ್ಷರು ಆಗಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯನ್ನು ಹೆದರಿಸಿ, ಬೆದರಿಸಿ ಅವರ ಜಾಗದಿಂದ ಖಾಲೀ ಮಾಡಿಸಿ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(**ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ.ಹೇ.ಕೇ.ಸ.ಇ.ಎ.ಒ.

**2 ನೇ.ಹೆ.ಪ್ರ:ದ:ನ್ಯಾ:ದಂ.,ರವರು,**
**ಕಡೂರು.**